37. ಮೆ: ವಿಕ್ಕೀನ್ ಆಗ್ರೋ-ಟೆಕ್, ಲಿ., ಹೈದರಾಬಾದ್.
38. ಮೆ: ವಿಜಯ ಸೀಡ್ಸ್ ಕಂಪನಿ, ಜಾಲ್ನಾ.
39. ಮೆ: ವಾಣಿ ಹೈಬ್ರಿಡ್ ಸೀಡ್ಸ್ ಕಂ. ಯೂರು
38. ಮೆ: ಜುವಾರಿ ಸೀಡ್ಸ್ ಲಿ. ಹೈದರಾಬಾದ್.

ಹುಲ್ಲುಗಾವಲು ಪ್ರದೇಶಗಳನ್ನು ಕಡಿಮೆ ಮಾಡುತ್ತಿರುವುದು.

1530(2156) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಲ್ಲುಗಾವಲು ಕ್ಷೇತ್ರಗಳನ್ನು ಕಡಿಮೆ ಮಾಡದಂತೆ ಮಾನ್ಯ ನ್ಯಾಯಾಲಯ ಆದೇಶಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಮಾನ್ಯ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಗೋಮಾಳ ಝೀತ್ರ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು? ಅವು ಯಾವುವು?

ಇ) ನ್ಯಾಯಾಲಯದ ಆದೇಶ ಉಲ್ಲಂಘಿಸಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಹೌದು

ಆ) ಅಂತಹ ಪ್ರಕರಣಗಳು ಯಾವುವೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಫೀಲ್ ಸಂಖ್ಯೆ: 5168 98 ಮತ್ತು 5169 : 98ರ ದಿನಾಂಕ: 18-1-1999ರಲ್ಲಿನ ಆದೇಶದಲ್ಲಿ ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 97(4) ರನ್ವಯ ಗೋಮಾಳದ ಜಮೀನುಗಳನ್ನು ಮಂಜೂರು ಮಾಡಬಹುದೆಂದು ಆದೇಶಿಸಿದೆ.

ಇ) ಉದ್ಭವಿಸುವುದಿಲ್ಲ.

ಆರಾಧನಾ ಯೋಜನೆಗೆ ಹಣ ಬಿಡುಗಡೆ.

1531(2150) ಶ್ರೀ ಉಜ್ಜೈನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರ್) :— ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) 1998-99ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಬಿಡುಗಡೆ ಮಾಡಿದ ಹಣ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)?

2) ಆ ಪೈಕಿ ಖರ್ಚು ಮಾಡಿದ ಹಣ ಎಷ್ಟು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ರಾಜ್ಯ ಸಚಿವರು) :—

1) 1998-99ನೇ ಸಾಲಿನಲ್ಲಿ ಆರಾಧನಾ ಯೋಜನೆಗಾಗಿ ರೂ.5.00 ಕೋಟಿ ಹಣ ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿ ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ತಾಲ್ಲೂಕುವಾರಿನಂತೆ ಉಳಿದ ಜಿಲ್ಲೆಗಳಿಗೆ ವಿಧಾನ ಸಭಾ ಕ್ಷೇತ್ರವಾರಿನಂತೆ ಸಮಾನವಾಗಿ ಹಂಚಿಕೆ ಮಾಡಲಾಗಿದೆ. (ಜಿಲ್ಲಾವಾರು ಮತ್ತು ವಿಧಾನಸಭಾ ಕ್ಷೇತ್ರ ಸಂಖ್ಯೆಯನ್ನು ಅನುಬಂಧದಲ್ಲಿ ಒದಗಿಸಿದೆ.

2) 1998-99ನೇ ಸಾಲಿನ ಆಥವಾ ಆರಾಧನಾ ಯೋಜನೆಯ ಅನುದಾನಕ್ಕೆ ಸಂಬಂಧಿಸಿದಂತೆ ಅನುದಾನವನ್ನು 31-3-98 ರಂದು ಮಂಜೂರು ಮಾಡಿರುವುದರಿಂದ ಈ ಹಣವನ್ನು ಖರ್ಚು ಮಾಡಲು ಸಂಬಂಧಿಸಿದ ಆರಾಧನಾ ಸಮಿತಿಯು ಪ್ರಸ್ತಾವನೆಗಳನ್ನು ತಹಶೀಲ್ದಾರರಿಂದ ಪಡೆದು ಅನುಮೋದಿಸಿ ಕೆಲಸ ಪ್ರಾರಂಭಿಸಬೇಕಾದುದರಿಂದ 1998-99 ನೇ ಸಾಲಿಗೆ ಬಿಡುಗಡೆ ಆದ ಹಣದಲ್ಲಿ ಹಣ ಖರ್ಚು ಮಾಡಿರುವ ಸಂಭವ ಕಡಿಮೆ.

ಅನುಬಂಧ - 1

| Sl.No. | District | Constituency | 1998-99 |
|---|---|---|---|
| 1. | Bangalore Rural | 9 | 19,56,519 |
| 2. | Bangalore Urban | 16 | 34,78,256 |
| 3. | Belgaum | 18 | 39,13,108 |
| 4. | Bijapur | 8 | 17,39,128 |
| 5. | Bagalkot | 7 | 15,21,737 |
| 6. | Bidar | 6 | 13,04,346 |
| 7. | Bellary | 8 | 17,39,128 |
| 8. | Chitradurga | 7 | 15,21,737 |
| 9. | Davangere | 7 | 15,21,737 |
| 10. | Chikmagalur | 6 (T-7) | 15,21,737 |
| 11. | Shimoga | 8 | 17,39,128 |
| 12. | Dakshina kannada | 9 | 19,56,519 |
| 13. | Udupi | 6 | 13,04,346 |
| 14. | Dharwad | 7 | 15,21,737 |
| 15. | Gadag | 5 | 10,86,995 |
| 16. | Haveri | 6 | 13,04,346 |

| | | | |
|---|---|---|---|
| 17. | Hassan | 8 | 17,39,128 |
| 18. | Kolar | 12 | 26,08,692 |
| 19. | Kodagu | 3 | 6,52,173 |
| 20. | Mandya | 9 | 19,56,519 |
| 21. | Mysore | 11 | 23,91,301 |
| 22. | Chamrajnagar | 5 | 10,86,955 |
| 23. | Raichur | 6 | 13,04,346 |
| 24. | Koppal | 5 | 10,86,955 |
| 25. | Gulbarga | 13 | 28,26,083 |
| 26. | Tumkur | 13 | 28,26,083 |
| 27. | Uttara Kannada | 6(T-11) | 23,91,301 |
| | | Total 224 | 5,00,00.000 |

**ಶಿವಮೊಗ್ಗ ಜಿಲ್ಲೆಯಲ್ಲಿನ ತಾಳೆ ಬೆಳೆಗಾರರಿಗೆ ಆಗುತ್ತಿರುವ ತೊಂದರೆ.**

1532(2187) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಶಿವಮೊಗ್ಗ ಜಿಲ್ಲೆಯ ತಾಳೆ ಬೆಳೆಗಾರರು ಬೆಳೆದ ತಾಳೆಹಣ್ಣಿಗೆ ಬೆಂಬಲ ಸಿಗದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ರೈತರು ಬೆಳೆದ ತಾಳೆ ಹಣ್ಣಿಗೆ ಬೆಂಬಲ ಬೆಲೆ ನೀಡಲು ಸರ್ಕಾರ ಯೋಚಿಸಿದೆಯೇ?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

1. ಶಿವಮೊಗ್ಗ ಜಿಲ್ಲೆಯ ರೈತರು ಬೆಳೆದ ತಾಳೆ ಹಣ್ಣಿಗೆ ಪ್ರತಿ ಟನ್ನಿಗೆ ರೂ. 3200-00 ರಂತೆ ಖರೀದಿ ದರ ನಿಗಧಿಪಡಿಸಿರುವುದು ದೇಶದಲ್ಲಿಯೇ ಅತ್ಯಂತ ಹೆಚ್ಚಿನ ದರವಾಗಿರುವುದರಿಂದ ಬೆಂಬಲ ಬೆಲೆ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲಿಲ್ಲ.

2. ಇಲ್ಲ.

**ರಾಜ್ಯ ರಸ್ತೆಸಾರಿಗೆ ಬಸ್ಸುಗಳಲ್ಲಿ ಪ್ರತಿದಿನ ಪ್ರಯಾಣ ಮಾಡುವವರಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್.**

1533(2191) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.